945 (27)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ತುಮಕೂರು ಜಿಲ್ಲೆಯ ಬೀಜೋತ್ಪಾದನಾ ಕೇಂದ್ರ, ಹಿರೇಹಳ್ಳಿಯ ಕೃಷಿ ಕ್ಷೇತ್ರವನ್ನು CHES-KVK ಹಿರೇಹಳ್ಳಿ ಇವರಿಗೆ ಹಸ್ತಾಂತರಿಸುವ ಬಗ್ಗೆ.

**ಸರ್ಕಾರದ ಆದೇಶ ಸಂಖ್ಯೆ ಕೃತೋಇ/113/ಕೃಇಕ/2009, ಬೆಂಗಳೂರು,**
**ದಿನಾಂಕ: 15/11/2012.**

ಓದಲಾಗಿದೆ: 1. ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಬೆಂಗಳೂರು ಇವರ ಪತ್ರ ಸಂಖ್ಯೆ F No.3-114/07 Est.16474, ದಿನಾಂಕ: 30/11/2009
2. ಕೃಷಿ ಆಯುಕ್ತರ ಪತ್ರ ಸಂಖ್ಯೆ ಉಕೃನಿ (ಸ್ಥಾಫಾ):ತಾಂ-2/33/09-10, ದಿನಾಂಕ: 22/06/2010.

## ಪ್ರಸ್ತಾವನೆ

ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ, ನಿರ್ದೇಶಕರು, ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಹೆಸರಘಟ್ಟ, ಬೆಂಗಳೂರು (Indian Institute of Horticultural Research) ಇವರ ಅಧೀನದಲ್ಲಿರುವ ಹಿರೇಹಳ್ಳಿ ಕೇಂದ್ರಿಯ ತೋಟಗಾರಿಕಾ ಪ್ರಾಯೋಗಿಕ ಕೇಂದ್ರದ ಆವರಣದಲ್ಲಿ ತುಮಕೂರು ಜಿಲ್ಲೆಗೆ ಮಂಜೂರಾದ ಹೆಚ್ಚುವರಿ ಕೃಷಿ ವಿಜ್ಞಾನ ಕೇಂದ್ರವು ಕಾರ್ಯನಿರ್ವಹಿಸುತ್ತಿದೆ. CHES-KVK ಹಿರೇಹಳ್ಳಿಯಲ್ಲಿ ಕೃಷಿ ವಿಜ್ಞಾನ ಕೇಂದ್ರದ ಯೋಜಿತ ಕಾರ್ಯಕ್ರಮಗಳನ್ನು ಕೈಗೊಳ್ಳಲು ಜಮೀನಿನ ಲಭ್ಯತೆ ಇಲ್ಲದ ಕಾರಣ, ಈ ಕೇಂದ್ರಕ್ಕೆ ಹೊಂದಿಕೊಂಡಿರುವ ಕೃಷಿ ಇಲಾಖೆಯ ಹಿರೇಹಳ್ಳಿ ಬೀಜೋತ್ಪಾದನಾ ಕೇಂದ್ರದ 10 ಹೆಕ್ಟೇರ್ (25 ಎಕರೆ) ಜಮೀನನ್ನು CHES-KVK ಹಿರೇಹಳ್ಳಿಗೆ ಹಸ್ತಾಂತರಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ. ಕೃಷಿ ಆಯುಕ್ತಾಲಯವು ಮೇಲೆ (2) ರಲ್ಲಿ ಓದಲಾದ ತಮ್ಮ ಪತ್ರದಲ್ಲಿನ ವರದಿಯಲ್ಲಿ ಕೃಷಿ ಸಂಶೋಧನೆಯಿಂದ ತುಮಕೂರು, ಪಾವಗಡ, ಶಿರಾ, ಮಧುಗಿರಿ ಮತ್ತು ಕೊರಟಗೆರೆ ತಾಲ್ಲೂಕುಗಳ ರೈತ ಸಮುದಾಯಕ್ಕೆ ಉಪಯೋಗವಾಗುವುದರಿಂದ ಹಾಗೂ ಈ ಪ್ರದೇಶದ ರೈತರ ಹಿತದೃಷ್ಟಿಯಿಂದ ಹಿರೇಹಳ್ಳಿ ಬೀಜೋತ್ಪಾದನಾ ಕೇಂದ್ರವನ್ನು ಕೆಲವೊಂದು ಷರತ್ತುಗಳೊಂದಿಗೆ ಹಸ್ತಾಂತರಿಸಬಹುದೆಂದು ಅಭಿಪ್ರಾಯ ನೀಡಿದೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ತುಮಕೂರು ಜಿಲ್ಲೆಯ ಬೀಜೋತ್ಪಾದನಾ ಕೇಂದ್ರ, ಹಿರೇಹಳ್ಳಿಗೆ ಸಂಬಂಧಿಸಿದ ಕೋಳಿಹಳ್ಳಿಯ ಸರ್ವೆ ನಂ: 91/2, 92/1, 92/2, 92/3, 92/4, 93, 94, 95, 96, ಹಾಗೂ ಸಂಗಾಪುರ ಸರ್ವೇ ನಂ. 46 ರಲ್ಲಿನ ಒಟ್ಟು ಭೌಗೋಳಿಕ ವಿಸ್ತೀರ್ಣ 9.96 ಹೆಕ್ಟೇರ್ ಜಮೀನನ್ನು ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಬೆಂಗಳೂರು ಇವರ ಅಧೀನದಲ್ಲಿರುವ ಕೇಂದ್ರಿಯ ತೋಟಗಾರಿಕಾ ಪ್ರಾಯೋಗಿಕ ಕೇಂದ್ರ (Central Horticultural Experiment Station) (IIHR), ಹಿರೇಹಳ್ಳಿ ಇವರಿಗೆ ಈ ಕೆಳಕಂಡ ಷರತ್ತುಗಳೊಂದಿಗೆ ಹಸ್ತಾಂತರಿಸಲು ಅನುಮೋದನೆ ನೀಡಿದೆ.

**ಷರತ್ತುಗಳು:-**

1. **ಜಮೀನನ್ನು ಕೃಷಿ ವಿಜ್ಞಾನ ಕೇಂದ್ರದ ಯೋಜಿತ ಕಾರ್ಯಕ್ರಮಗಳನ್ನು ಮಾತ್ರ ಕೈಗೊಳ್ಳಲು ಉಪಯೋಗಿಸಿಕೊಳ್ಳುವುದು.**
2. **ಕೃಷಿ ಇಲಾಖೆಯ ಬೇಡಿಕೆಯಂತೆ ಕೃಷಿ ಇಲಾಖೆಗೆ ಬೇಕಾಗಿರುವ ಬೀಜೋತ್ಪಾದನಾ ಕಾರ್ಯಕ್ರಮ ಮತ್ತು ಪ್ರಾತ್ಯಕ್ಷಿತೆಯನ್ನು ಕೈಗೊಳ್ಳುವುದು.**
3. **ಜಮೀನಿನ ಯಾವುದೇ ಭಾಗವನ್ನು ಗುತ್ತಿಗೆ ಆಧಾರದ ಮೇಲಾಗಲಿ ಅಥವಾ ಮಾರಾಟವನ್ನು ಬೇರೊಬ್ಬರಿಗೆ ಮಾಡಬಾರದು.**
4. **ಜಮೀನಿನ ಒಡೆತನವು ಕೃಷಿ ಇಲಾಖೆಯ ವಶದಲ್ಲಿಯೇ ಇರುತ್ತದೆ.**

..2..

5. ಅಭಿವೃದ್ಧಿ ಕಾರ್ಯಕ್ರಮ ಹಾಗೂ ಇತರ ಕಾರ್ಯಕ್ರಮಗಳಿಗೆ ಕೃಷಿ ಇಲಾಖೆಯು ಯಾವುದೇ ಅನುದಾನವನ್ನು ಬಿಡುಗಡೆ ಮಾಡುವುದಿಲ್ಲ.

6. ಒಂದು ವೇಳೆ CHES, ಹಿರೇಹಳ್ಳಿ ಇವರು ಬೀಜೋತ್ಪಾದನಾ ಕೇಂದ್ರದ ಜಮೀನನ್ನು ಹಿಂದಕ್ಕೆ ಕೃಷಿ ಇಲಾಖೆಗೆ ವಾಪಸ್ಸು ನೀಡಬೇಕಾದ ಸನ್ನಿವೇಶ ಒದಗಿದ್ದಲ್ಲಿ, ತಮ್ಮ ಅವಧಿಯಲ್ಲಿ ಕೃಷಿ ಕ್ಷೇತ್ರದಲ್ಲಿ ಅಭಿವೃದ್ಧಿಗಾಗಿ ಕೈಗೊಂಡಿರುವ ಕಾರ್ಯ ಮತ್ತು ಕಟ್ಟಡದ ಮೌಲ್ಯ ಇತ್ಯಾದಿಗಳನ್ನು ಕೃಷಿ ಇಲಾಖೆಯು CHES, ಹಿರೇಹಳ್ಳಿ ಇವರಿಗೆ ವಾಪಸ್ಸು ನೀಡುವುದಿಲ್ಲ.

7. ಕೃಷಿ ಇಲಾಖೆಗೆ ರೈತ ಸಂಪರ್ಕ ಕೇಂದ್ರ ಮತ್ತು ಇತರೆ ಕಟ್ಟಡಗಳು ನಿರ್ಮಿಸುವ ಸಂದರ್ಭ ಬಂದಾಗ ಅಥವಾ ಅವಶ್ಯಕತೆ ಇದ್ದಲ್ಲಿ ಈಗ ನೀಡಿರುವ ಜಮೀನಿನಲ್ಲಿ ಅವಕಾಶ ಮಾಡಿಕೊಡುವುದು.

8. ಈ ಹಸ್ತಾಂತರವನ್ನು 30 (ಮೂವತ್ತು) ವರ್ಷಗಳ ಗುತ್ತಿಗೆ (ಲೀಸ್) ಆಧಾರದ ಮೇಲೆ ನೀಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜೆ.ಆರ್. ವಿಶ್ವನಾಥಾಚಾರ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
(ಕೃಷಿ ಇಲಾಖೆ(ಯೋಜನೆ)

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ-ಮುಂಬಿನ ವಾರದ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಕೋರಿದೆ

ಗೆ,

1. ಪ್ರಧಾನ ಮಹಾಲೇಖಪಾಲಕರು, (ಲೆಕ್ಕ ಪತ್ರ ಮತ್ತು ತನಿಖೆ), ಕರ್ನಾಟಕ, ಬೆಂಗಳೂರು.
2. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
3. ನಿರ್ದೇಶಕರು ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಹೆಸರಘಟ್ಟ, ಬೆಂಗಳೂರು.
4. ಜಂಟಿ ಕೃಷಿ ನಿರ್ದೇಶಕರು, ತುಮಕೂರು ಜಿಲ್ಲೆ, ತುಮಕೂರು.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.